ಓಎಸ್ 229/2011

ಪಿಡಬ್ಲ್ಯೂ–1

ದಿ ಃ 13.08.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲು ಃ ಶ್ರೀ ಜಿ ಎಸ್ ಎಂ ವಕೀಲರಿಂದ

ದಾವಾ 1 ನೇ ಐಟಂ ಸ್ವತ್ತು ನಮ್ಮದಾಗಿರುತ್ತದೆ. ದಾವಾ 2 ನೇ ಐಟಂ ಸ್ವತ್ತು ಪ್ರತಿವಾದಿಗಳದ್ದಾಗಿರುತ್ತದೆ. 1 ನೇ ಐಟಂ ಸ್ವತ್ತುವಿನಲ್ಲಿ ನಿಮ್ಮ ಆಸ್ತಿ ಎಷ್ಟು ಇದೆ ಎಂದರೆ ಸಾಕ್ಷಿಯು ಸ.ನಂ. 167/1 ರಲ್ಲಿ 1 ಎಕರೆ 22 ಗುಂಟೆ, ಸ.ನಂ. 167/2 ರಲ್ಲಿ 1 ಎಕರೆ 22 ಗುಂಟೆ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. 2 ನೇ ಐಟಂ ನಲ್ಲಿ ಸ.ನಂ. 167/1 ರಲ್ಲಿ 2 ಎಕರೆ 4 ಗುಂಟೆ, ಮತ್ತು ಸ.ನಂ. 167/2 ರಲ್ಲಿ 2 ಎಕರೆಗೆ ದಾವೆಯನ್ನು ಹಾಕಲಾಗಿರುತ್ತದೆ. 2 ನೇ ಐಟಂ ಸ್ವತ್ತುವಿನಲ್ಲಿ ಎರಡು ಮನೆ , ಒಂದು ಬೋರ್ ಇದ್ದು , ಅವುಗಳಲ್ಲಿ ಒಂದು ಮನೆಯನ್ನು ನನ್ನ ತಂದೆಯವರು ಬದುಕಿದ್ದಾಗ ನಿರ್ಮಿಸಿದ್ದರು, ಮತ್ತೊಂದು ಮನೆಯನ್ನು ನಮ್ಮ ತಾಯಿಯವರು ನಿರ್ಮಿಸಿರುತ್ತಾರೆ. ನಿಮ್ಮ ತಾಯಿಯವರು ಮನೆ ಕಟ್ಟಿಸಿದ ಕುರಿತು ನಿಮ್ಮ ಪಾತ್ರ ಏನೂ ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಾಯಿ, ನಾನು ಮತ್ತು ನನ್ನ ಸಹೋದರರು ಸೇರಿ ಕಟ್ಟಿಸಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ನಾವುಗಳು ಮನೆ ಕಟ್ಟಿಸುವಾಗ ಹಾಗೂ ಬೋರ್ ವೆಲ್ ಕೊರೆಸುವಾಗ ಯಾವುದಾದರೂ ಸರ್ವೆ ಅಳತೆ ಹಾಗೂ ಸ್ಕೆಚ್ ಮಾಡಿಸಿರುತ್ತೀರಾ ಎಂದರೆ ಆಗ ಇರಲಿಲ್ಲ ಎಂದು ನುಡಿಯುತ್ತಾರೆ. ಮನೆಗಳನ್ನು ಕಟ್ಟಿಸುವಾಗ ಸಂಬಂಧಪಟ್ಟ ಪಂಚಾಯಿತಿಯಿಂದ ಪರವಾನಗಿಯನ್ನು ಪಡೆದಿರುತ್ತೀರಾ ಎಂದರೆ ಜಮೀನಿನಲ್ಲಿ ಮನೆ ಕಟ್ಟಿಸಲು ಪರವಾನಗಿ ಬೇಕಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಬೋರ್ ತೆಗೆಸಲು ಸಂಬಂಧಪಟ್ಟ ಕಛೇರಿಯಿಂದ ಪರವಾನಗಿಯನ್ನು ಪಡೆದಿರುತ್ತೀರಾ ಎಂದರೆ ಬೋರ್ ತೆಗೆಸಲು ಪರವಾನಗಿ ಬೇಕಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಮನೆ ಕಟ್ಟಿಸುವ ಸಲುವಾಗಿ ನಕ್ಷೆಯನ್ನು ಬೇಕಾಗಿರುವುದಿಲ್ಲ ಎಂದು ಮಾಡಿಸಿರುವುದಿಲ್ಲ.

2 ನೇ ಐಟಂ ಸ್ವತ್ತುವಿನಲ್ಲಿ ಎರಡು ಮನೆಗಳು ಹಾಗೂ ಬೋರ್ ವೆಲ್ ಇರುವ ಕುರಿತು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ಯಾವುವು ಎಂದರೆ ಸಾಕ್ಷಿಯು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಗೂ ಕೇಸ್ ಹಾಕಿದ ನಂತರ ಸ್ಕೆಚ್ ಮಾಡಿಸಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು 1 ನೇ ಪ್ರತಿವಾದಿಯ ಆಸ್ತಿಯನ್ನು ತಾನು ಇಟ್ಟುಕೊಳ್ಳುತ್ತೇನೆಂದು ಯಾವಾಗ ಮತ್ತು ಯಾರ ಮುಂದೆ ಹೇಳಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನೀವಾಗಲೀ, ನಿಮ್ಮ ತಾಯಿಯವರಾಗಲೀ, 1 ನೇ ಪ್ರತಿವಾದಿಗೆ ನಿಮ್ಮ ಆಸ್ತಿಯನ್ನು ನಾವು ಅನುಭವಿಸುತ್ತೇವೆಂದು ಯಾವಾಗ ಮತ್ತು ಯಾರ ಮುಂದೆ ಹೇಳಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ಮನೆಗೆ ಬಂದಾಗ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ಯಾವ ವರ್ಷ ಮತ್ತು ಯಾವ ದಿನಾಂಕ ಹೇಳಿರುತ್ತೇವೆಂದು ನನಗೆ

ಗೊತ್ತಿರುವುದಿಲ್ಲ. ನನ್ನ ವಾದಪತ್ರದಲ್ಲಾಗಲೀ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ 1 ನೇ ಪ್ರತಿವಾದಿ ನಮ್ಮ ಮನೆಗೆ ಬಂದಾಗ ನಿಮ್ಮ ಆಸ್ತಿಯನ್ನು ನಾವೇ ಅನುಭವಿಸುತ್ತೇವೆಂದು ಹೇಳಿರುವ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸರಿ.

ನನಗಾಗಲೀ, ನಮ್ಮ ತಾಯಿಯವರಿಗಾಗಲೀ ದಾವಾ 2 ನೇ ಐಟಂ ಸ್ವತ್ತುವಿನಲ್ಲಿ ಯಾವುದೇ ಹಕ್ಕು , ಹಿತಾಸಕ್ತಿ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ 2 ನೇ ಐಟಂ ಸ್ವತ್ತುವಿನಲ್ಲಿ ನಮಗೆ ಸೇರಿದ ಮನೆಗಳಾಗಲೀ, ಅಥವಾ ಬೋರ್ ವೆಲ್ ಆಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಮ್ಮ ಭಾಗದ ಆಸ್ತಿಯನ್ನು 4 ನೇ ಪ್ರತಿವಾದಿಗೆ 1997 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒತ್ತುವರಿ ಆಗಿರುವ ವಿಚಾರವನ್ನು ನಾಗೇಗೌಡ ರವರಿಗೆ ತಿಳಿಸಿದ್ದೆ ಎಂದು ನುಡಿಯುತ್ತಾರೆ. ಆ ರೀತಿ ನಾಗೇಗೌಡರವರಿಗೆ ಯಾವ ದಿನಾಂಕದಂದು ಮತ್ತು ಯಾರ ಸಮಕ್ಷಮ ಹೇಳಿರುತ್ತೀರಾ ಎಂದರೆ ಸಾಕ್ಷಿಯು ದಿನಾಂಕ ನೆನಪಿರುವುದಿಲ್ಲ , ಆದರೆ ನಾಗೇಗೌಡ ರವರು ಜಮೀನು ತೆಗೆದುಕೊಳ್ಳುವಾಗ ಜಮೀನಿನ ಬಳಿ ಬಂದಾಗ ಹೇಳಿರುತ್ತೇನೆಂದು ನುಡಿಯುತ್ತಾರೆ. ಅದಕ್ಕೆ ಯಾರೂ ಸಾಕ್ಷಿ ಇರುವುದಿಲ್ಲ ಎಂದರೆ ಸರಿ. ನಾಗೇಗೌಡ ರವರಿಗೆ ಜಮೀನು ಒತ್ತುವರಿ ಮಾಡಿಕೊಂಡಿರುವ ಕುರಿತು ತಿಳಿಸಿದ ವಿಚಾರವನ್ನು ನನ್ನ ವಾದಪತ್ರದಲ್ಲಾಗಲೀ ಅಥವಾ ಪ್ರಮಾಣ ಪತ್ರದಲ್ಲಾಗಲೀ ಹೇಳಿರುವುದಿಲ್ಲ.

ನಿಶಾನೆ ಪಿ 14 ರಲ್ಲಿ ಸ.ನಂ. 167/1 , 167/2 ರ ಜಮೀನಿನ ಯಾವ ಭಾಗದ ಸರ್ವೆಗಾಗಿ ಬರುತ್ತಿರುತ್ತಾರೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ನಿಶಾನೆ ಪಿ 14 ರಲ್ಲಿ ದೇವಿರಮ್ಮರವರನ್ನು ಹೊರತು ಪಡಿಸಿ ಬೇರೆ ಯಾರಿಗೂ ನೋಟೀಸು ನೀಡಿರುವ ಕುರಿತು ನಮೂದು ಇರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಯಾವ ದಿನಾಂಕಂದು ಸರ್ವೆ ಮಾಡಲು ಬರಲಾಗುತ್ತದೆ ಎಂದು ದಿನಾಂಕವನ್ನೂ ಸಹಾ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಶಾನೆ ಪಿ 15 ರಲ್ಲಿ ಸರ್ವೆಯನ್ನು ಯಾವ ದಿನಾಂಕದಂದು ಮಾಡಲಾಗಿರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಶಾನೆಪಿ 15 ರಂತೆ ಸರ್ವೆಯನ್ನು ಮಾಡುವಾಗ ಮಹಜರ್ ಕ್ರಮ ಜರುಗಿಸಿ ಅಕ್ಕ – ಪಕ್ಕದವರ ಸಹಿಯನ್ನು ಪಡೆದಿರುತ್ತಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಶಾನೆ ಪಿ 14 ನ್ನು ದೇವಿರಮ್ಮರವರು ಸ್ವೀಕರಿಸಿದ ಕುರಿತು ಅವರ ಸಹಿ ಸದರಿ ದಾಖಲೆಯಲ್ಲಿ ಇರುವುದಿಲ್ಲ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ನಿಶಾನೆ ಪಿ 14 ಮತ್ತು 15 ನ್ನು ಪ್ರಸ್ತುತ ದಾವೆಯನ್ನು ಹೂಡಿದ ನಂತರದಲ್ಲಿ ಪಡೆಯಲಾಗಿರುತ್ತದೆ ಎಂದರೆ ಸರಿ. ಈ ದಾವೆಗೋಸ್ಕರ ನಿಶಾನೆ ಪಿ 14 ಮತ್ತು 15 ನ್ನು ಸರ್ವೆಯರ್ ಜೊತೆ ಶಾಮೀಲಾಗಿ ಬನವಟ್ಟು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯಾಗಲೀ, ನಮ್ಮ ತಾಯಿಯಾಗಲೀ, ನಾನಾಗಲೀ, ಎಂದೂ ಸಹಾ ದಾವಾ 2 ನೇ ಐಟಂ ಸ್ವತ್ತನ್ನು ಒತ್ತುವರಿ ಮಾಡಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ ಕಳುಹಿಸಿದ ನೋಟೀಸ್ ಗೂ ವಾದ ಪತ್ರಕ್ಕೂ ಸಾಮ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ವ್ಯಾಜ್ಯ ಕಾರಣವನ್ನು ತೋರಿಸಿ ಪ್ರತಿವಾದಿಗಳ ವಿರುದ್ದ ತಪ್ಪು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ ಕ್ರಯಕ್ಕೆ ಕೊಂಡುಕೊಂಡ ದಿನದಿಂದಲೂ ಕ್ರಯಪತ್ರದಲ್ಲಿ ನಮೂದಿಸಿದ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ